ತಿಂಗಳು ಬದುಕಬಹುದು ಅಂತ ಹೇಳಿದ್ರು. ನಂಗೆ ಭೂಮಿ ಕುಸಿದ ಹಾಗಾಯ್ತು. ದಯಾಕರನ ಹತ್ರ ಹೇಳಿದೆ. ಅವ ನಂಗೆ ಈಗ ನೋಟ್ ಬ್ಯಾನ್, ಜಿಎಸ್‌ಟಿ ಎಲ್ಲ ತೊಂದರೆ ಆಗಿದೆ. ಕಂಡಾಬಟ್ಟೆ ಲಾಸ್ ಅಂತ ಹೇಳಿದ. ಎಂತ ಮಾಡ್ಲಿಕ್ಕೆ ಆಗ್ತದೆ? ನಾನು ಅವುಡುಗಚ್ಚಿ ಅಲ್ಲಿ ಇಲ್ಲಿ ಸಾಲಮಾಡಿ, ಸಣ್ಣ ಮಟ್ಟಿನ ಮದ್ದು ಮಾಡಿ ಅವಳ ಸಾವನ್ನು ಮುಂದಕ್ಕೆ ಹಾಕ್ತಾ ಬಂದೆ. ಆದ್ರೆ ಅವಳು ಹೆಚ್ಚು ಸಮಯ ನರಳಲಿಲ್ಲ. ಮೊನ್ನೆ ಫೆಬ್ರುವರಿಯಲ್ಲಿ ದೇವರ ಪಾದ ಸೇರಿದ್ಲು.'

ದಯಾನಂದ ತಲೆ ಅಡಿಗೆ ಹಾಕಿ ಒಮ್ಮೆ ಮಾತು ನಿಲ್ಲಿಸಿದ. ಮತ್ತೆ ಒಂದೆರಡು ನಿಮಿಷ ಬಿಟ್ಟು ಮುಂದುವರಿಸಿದ.

'ಇವಳ ಹನ್ನೆರಡನೆ ದಿನಕ್ಕೆ ಹೆಂಡತಿ ಮಕ್ಕಳನ್ನು ಕರ್ಕೊಂಡು ತಮ್ಮ ಬಂದಿದ್ದ. ಆವತ್ತು ರಾತ್ರಿ, ಅಣ್ಣಾ... ಇನ್ನು ನೀನು ಒಬ್ಬನೇ ಇಲ್ಲಿ ಇರೂದು ಬೇಡ. ಇಲ್ಲಿನ ಆಸ್ತಿಯೆಲ್ಲ ಮಾರಿ ನಮ್ಮೊಟ್ಟಿಗೆ ಬಾ. ನಂಗೆ ಸಾ ಅಲ್ಲಿ ವ್ಯವಹಾರ ಎಲ್ಲ ಲಾಸಿನಲ್ಲಿ ನಡೀತಾ ಉಂಟು. ನೋಡಿಕೊಳ್ಳಿಕ್ಕೆ ಒಂದು ಜನ ಅಂತ ಆ ಗ್ತದೆ ಅಂದ. ನಂಗೆ ಎದೆ ದಸಕ್ಕಂತ ಆಯಿತು. ಅರವತ್ತು ಎಪ್ಪತ್ತು ವರ್ಷ ಬಾಳಿ ಬದುಕಿದ ಮನೆ. ಮೈ ಬಗ್ಗಿಸಿ ರಟ್ಟೆ ಮುರ್ದು ಬೆಳೆಸಿದ ತೋಟ, ಗದ್ದೆ ಎಲ್ಲ ಬಿಟ್ಟು ಅಲ್ಲಿಗೆ ಹೋಗುದಾ? ಸಾಧ್ಯವೇ ಇಲ್ಲ ಅಂತ ಹೇಳಿದೆ. ಅವ ಒಂದು ನಮೂನಿ ಹಟ ಮಾಡಿದ. ನಾನು ಒಪ್ಲೇ ಇಲ್ಲ. ಆಗ ಅವನ ಹೆಂಡತಿ, ಅಯ್ಯಾ... ನೀವು ಯಾಕೆ ಅವರನ್ನು ಅಷ್ಟು ಹಟ ಮಾಡಿ ಬರ್ಲಿಕ್ಕೆ ಹೇಳುದು? ಇಲ್ಲಿ ಇದ್ದುಮನೆ, ಗದ್ದೆ ತೋಟ ಎಲ್ಲ ನೋಡಿಕೊಳ್ಳಿ. ಹೇಗೂ ಅವ್ರಿಗೆ ಈಗ ಹಿಂದಿಲ್ಲ ಮುಂದಿಲ್ಲ. ನಾಳೆ ದಿವಸ ಅದೆಲ್ಲ ನಮಿಗೇ ಸೇರುದಲ್ವಾ ಅಂತ ರಾಗ ಎಳೆದಳು. ಅದು ಕೇಳಿ ನಂಗೆ ಮತ್ತೆ ಸಾ ಕೈಕಾಲು ನಡುಗಿತು. ನೀನು ಹೇಳುದು ಸರಿಯೇ. ಅವ ಇಷ್ಟು ವರ್ಷ ಊರಲ್ಲಿ ಇದ್ದವ. ಹಾಗೆಲ್ಲ ಇದ್ದಕ್ಕಿದ್ದ ಹಾಗೆ ಬಿಟ್ಟು ಬರೂದು ಅಂದ್ರೆ ಕಷ್ಟವೇ. ಅವ ಇಲ್ಲಿಯೇ ಇದ್ದು ಮನೆ, ಆಸ್ತಿ ಎಲ್ಲ ನೋಡಿಕೊಂಡು

